ಓ.ಎಸ್.ನಂ.**172/2016**
ಪಿಡಬ್ಲ್ಯೂ .**1**

ಪ್ರಮಾಣ ವಚನ ಬೋಧಿಸಿದ ದಿನಾಂಕಃ **09.06.2026**
ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.

**ವಾಟೀ ಸವಾಲುಃ 9 ಮತ್ತು 10 ನೇ ಪ್ರತಿವಾದಿ ಪರ ಶ್ರೀ ಹೆಚ್.ಎನ್.ವಿ ವಕೀಲರಿಂದ**

ನಾನು **10** ನೇ ತರಗತಿಯ ತನಕ ಓದಿದ್ದೇನೆ. **1992–93** ರಲ್ಲಿ **10** ನೇ ತರಗತಿ ಮುಗಿಸಿರುತ್ತೇನೆ. ನನ್ನ ಜನ್ಮ ದಿನಾಂಕಃ**14.01.1977**. ಈ ಕೇಸನ್ನು ವಿಭಾಗಕ್ಕಾಗಿ ಹಾಕಿದ್ದೇನೆ. ನಾನು ನನ್ನ ಸಾಕ್ಷಿಯ ವಿಚಾರಣೆಯನ್ನು ಉಳಿದ ವಾದಿಯರ ಪರವಾಗಿಯು ಕೂಡ ಹೇಳುತ್ತಿದ್ದೇನೆ. **1** ಮತು **2** ನೇ ವಾದಿಯರು ಸಾಕ್ಷಿ ನುಡಿಯಲು ಅಧಿಕಾರ ಪತ್ರ ಬರೆದುಕೊಟ್ಟಿದ್ದಾರಾ? ಎಂದರೆ ಇಲ್ಲ. ನನ್ನ ಪ್ರಮಾಣಪತ್ರದಲ್ಲಿ ಉಳಿದ ವಾದಿಯರ ಪರವಾಗಿ ಸಾಕ್ಷಿಯನ್ನು ಹೇಳಾಗಿದೆ ಎಂದು ಬರೆಸಿದ್ದೇನೆಂದರೆ ಸರಿ. ನನ್ನ ತಾಯಿಯ ತವರು ಮನೆ ಯಾವು ಊರು ಎಂದರೆ ಗೊತ್ತಿಲ್ಲ. ನನ್ನ ತಾಯಿಯ ತಂದೆಯ ಹೆಸರು ಗೊತ್ತಿಲ್ಲ. ನನ್ನ ತಾಯಿಯ ತಂದೆಯ ಹೆಸರು ಮುನಿನಾಗಪ್ಪ ಎಂದರೆ ಗೊತ್ತಿಲ್ಲ. ಮುನಿನಾಗಪ್ಪನವರ ತಂದೆಯ ಹೆಸರು ಸುಬ್ಬಣ್ಣ ಎಂದರೆ ಗೊತ್ತಿಲ್ಲ. ಸದರಿ ಸುಬ್ಬಣನಿಗೆ ನಾಗಪ್ಪನೆಂಬ ಅಣ್ಣನಿದ್ದನು ಎಂದರೆ ಗೊತ್ತಿಲ್ಲ. ಸದರಿ ನಾಗಪ್ಪನಿಗೆ ಗಂಗಮ್ಮ ಎಂಬ ಮಗಳಿದ್ದಳು ಎಂದರೆ ಗೊತ್ತಿಲ್ಲ.

ದಾವಾ ಆಸ್ತಿಯು ಮೂಲತಃ ಯಾರಿಗೆ ಸೇರಿದ್ದು ಎಂದರೆ ಗೊತ್ತಿಲ್ಲ. ದಿನಾಂಕಃ**26.04.1965** ರ ದಾನ ಪತ್ರದ ಮೂಲಕ ದಾವಾ ಆಸ್ತಿಯು ನಾರಾಯಣಮ್ಮನವರಿಗೆ ಬಂದು ಎಂದರೆ ಗೊತ್ತಿಲ್ಲ. ಈ ದಾವೆ ಹಾಕುವಾಗ ದಾವಾ ಆಸ್ತಿಯು ಹೇಗೆ ಬಂದು ಎಂದು ವಕೀಲರಿಗೆ ಮಾಹಿತಿ ನೀಡಿದ್ದೀರಾ? ಎಂದರೆ ಇಲ್ಲ. ವಕೀಲರಿಗೆ ಮಾಹಿತಿ ಕೊಡುವಾಗ ನಾವು ಮೂರು ಜನ ವಾದಿಯರು ಹೋಗಿದ್ದೆವು. **1** ಮತ್ತು **2** ನೇ ವಾದಿಯರಿಗೂ ಕೂಡ ದಾವಾ ಆಸ್ತಿಯು ಹೇಗೆ ಬಂತು ಎಂದು

ಗೊತ್ತಿಲ್ಲವಾ? ಎಂದರೆ ಇಲ್ಲ. ದಾವಾ ಆಸ್ತಿಯು ದಿನಾಂಕ:**26.04.1965** ರಲ್ಲಿ ಗಂಗಮ್ಮನವರ ಕಡೆಯಿಂದ ನಾರಾಯಣಮ್ಮನವರೆ ದಾನ ಪತ್ರದ ಮೂಲಕ ಬಂತು ಎಂದರೆ ಗೊತ್ತಿಲ್ಲ. ದಾವಾ ಅಸ್ತಿಯ ಖಾತೆ ಪಹಣಿಯು **1996–97** ರಿಂದ ನನ್ನ ತಾಯಿಯ ಹೆಸರಿನಲ್ಲಿ ಇತ್ತು. ಅದಕ್ಕೂ ಪೂರ್ವದಲ್ಲಿ ದಾವಾ ಆಸ್ತಿಯ ಖಾತೆಯು ನನ್ನ ತಾಯಿಯ ಹೆಸರಿನಲ್ಲಿ ಇತ್ತು ಎಂದರೆ ಗೊತ್ತಿಲ್ಲ.

ದಿನಾಂಕ:**15.06.1984** ರಲ್ಲಿ **1** ನೇ ಪ್ರತಿವಾದಿಯು ದಾವಾ ಆಸ್ತಿಯನ್ನು ದೇವಾರಾಜ್ ಎಂ. ಎಂಬುವವರಿಗೆ ಕ್ರಯಪತ್ರ ಮಾಡಿಕೊಟ್ಟಿದ್ದಾರೆಂದರೆ ಗೊತ್ತಿಲ್ಲ. ಸದರಿ ಕ್ರಯಪತ್ರದ ಬಗ್ಗೆ ಈ ದಾವೆ ಹಾಕುವಾಗ ವಕೀಲರಿಗೆ ಮಾಹಿತಿ ಕೊಟ್ಟಿದ್ದೀರಾ? ಎಂದರೆ ಇಲ್ಲ. ಈ ದಾವೆ ಹಾಕುವಾಗ ನೀವು ಮೂರು ಜನ ವಾದಿಯರಿಗೆ **1965** ರ ದಾನ ಪತ್ರ ಮತ್ತು **1994** ರ ಕ್ರಯಪತ್ರದ ಬಗ್ಗೆ ಗೊತ್ತಿತ್ತಾ? ಎಂದರೆ ಇಲ್ಲ. ಗಂಗಮ್ಮನವರು ನಾರಾಯಣಮ್ಮನಿಗೆ **1965** ರ ದಾನ ಪತ್ರದ ಮೂಲಕ ಕೊಟ್ಟಿದ್ದರಿಂದ ಅದು ಅವರ ಸ್ವಯಾರ್ಜಿತ ಆಸ್ತಿಯಾಗುತತದೆ ಎಂದರೆ ಸರಿ. ಸಾಕ್ಷಿಗೆ **1965** ರ ಮೂಲ ದಾನ ಪತ್ರವನ್ನು ತೋರಿಸಿದಾಗ ನನಗೆ ಈ ಕನ್ನಡ ಓದಲು ಬರುವುದಿಲ್ಲ ಎಂದು ಹೇಳುತ್ತಾರೆ. ಸಾಕ್ಷಿಯು **1965** ರ ದಾನ ಪತ್ರವನ್ನು ನಾನು ನನ್ನ ಮನೆಯಲ್ಲಿ ನೋಡಿದ್ದೇನೆಂದು ಒಪ್ಪಿಕೊಳ್ಳುತ್ತಾರೆ. ಸಾಕ್ಷಿಯು ಮೂಲ ದಾನ ಪತ್ರವನ್ನು ನೋಡಿ ಒಪ್ಪಿಕೊಂಡಿರುವ ಕಾರಣ ದಿನಾಂಕ:**26.04.1965** ರ ದಾನ ಪತ್ರದ ಮೂಲ ಪ್ರತಿಯನ್ನು ನಿ.ಡಿ.**1** ಎಂದು ಗುರುತಿಸಲಾಯಿತು.

ನಿಮ್ಮ ತಾಯಿ ಅಂದರೆ **1** ನೇ ಪ್ರತಿವಾದಿಯು ದಾವಾ ಆಸಿದತನ್ನು **1984** ರಲ್ಲಿ ದೇವರಾಜುರವರಿಗೆ ಮಾರಾಟ ಮಾಡಿದ್ದು, ಸದರಿ ಕ್ರಯಪತ್ರವನ್ನು ನೋಡಿದ್ದೀರಾ? ಎಂದರೆ ಹೌದು. ಸಾಕ್ಷಿಗೆ ದಿನಾಂಕ:**26.10.1996** ರ ನೋಂದಾಯಿತ ಮೂಲ ಕ್ರಯಪತ್ರವನ್ನು ತೋರಿಸಿದಾಗ ಅದನ್ನು ನೋಡಿ ಗುರುತಿಸಿದ್ದು, ಸದರಿ ಪತ್ರವನ್ನು ನಿ.ಡಿ.**2** ಎಂದು ಗುರುತಿಸಲಾಯಿತು. ಸದರಿ ಕ್ರಯಪತ್ರವು ನನ್ನ ತಾಯಿಯ ಹೆಸರಿನಲ್ಲಿ ನೊಂದಣಿಯಾಗಿದೆ ಎಂದರೆ ಸರಿ. **1965** ರ ದಾನಪತ್ರದ ಆಧಾರದ ಮೇಲೆ ನನ್ನ

ತಾಯಿಯು ದೇವರಾಜುರವರಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಿದ್ದಾರೆಂದರೆ ಸರಿ. **1996** ರ ಕ್ರಯಪತ್ರದ ಆಧಾರ ಮೇಲೆ ದಾವಾ ಆಸ್ತಿಯ ಖಾತೆಯು ನನ್ನ ತಾಯಿಯ ಹೆಸರಿಗೆ ಖಾತೆಯಾಗಿದೆ ಎಂದರೆ ಸರಿ.

ಸಾಕ್ಷಿಗೆ ದಿನಾಂಕಃ**18.01.2010** ರ ಕ್ರಯದ ಕರಾರು ಪತ್ರದಲ್ಲಿರುವ ಸಹಿಗಳನ್ನು ಮಾತ್ರ ತೋರಿಸಿದಾಗ ಸದರಿ ದಾಖಲೆಯ ಪ್ರತಿ ಪುಟದಲ್ಲಿರುವ ವಾದಿಯರ ಸಹಿಗಳನ್ನು ಸಾಕ್ಷಿಯು ನೋಡಿ ಒಪ್ಪಿಕೊಂಡಿರುತ್ತಾರೆ. ಸದರಿ ಕ್ರಯದ ಕರಾರುಪತ್ರವನ್ನು ನಿ.ಡಿ.**3** ಎಂದು, ವಾದಿಗಳ ಸಹಿಗಳನ್ನು ನಿ.ಡಿ.**3**(ಎ) ಯಿಂದ ನಿ.ಡಿ.**3**(ಸಿ) ಎಂದು ಗುರುತಿಸಲಾಯಿತು. ನಾವು ನಾರಾಯಣಮ್ಮನ ಮಕ್ಕಳಾಗಿರುವುದರಿಂದ ಸದರಿ ಪತ್ರಕ್ಕೆ ಸಹಿ ಮಾಡಿದ್ದೇವೆಂದರೆ ಸರಿ. ನಿ.ಡಿ.**3** ಕ್ಕೆ ನಾವಲ್ಲದೇ **1** ರಿಂದ **8** ನೇ ಪ್ರತಿವಾದಿಯರು ಸಹಿ ಮಾಡಿದ್ದಾರೆಂದರೆ ಸರಿ. ನಿ.ಡಿ.**3** ರ ಪತ್ರವು ನನ್ನ ತಾಯಿಯು ದಾವಾ ಆಸ್ತಿಯನ್ನು **9** ನೇ ಪ್ರತಿವಾದಿಗೆ ಮಾರಾಟ ಮಾಡಲು ಒಪ್ಪಿ, ಬರೆದು ಕೊಟ್ಟ ಕ್ರಯದ ಕರಾರು ಪತ್ರವೆಂದರೆ ಸರಿ. ಕ್ರಯದ ಮಾತುಕತೆಯು ಎಲ್ಲಿ ಆಗಿದೆ ಎಂದರೆ ಗೊತ್ತಿಲ್ಲ. ಕರಾರುಪತ್ರ ಬರೆದುಕೊಟ್ಟಾಗ ನನ್ನ ತಾಯಿ ಎಷ್ಟು ಹಣ ಪಡೆದುಕೊಂಡರು ಎಂದರೆ ಗೊತ್ತಿಲ್ಲ. ಸದರಿ ಕಾರಾರುಪತ್ರಕ್ಕೆ ಎಲ್ಲಿ ಸಹಿ ಮಾಡಿದ್ದೀರಾ? ಎಂದರೆ ನೆನಪಿಲ್ಲ. ದಾವಾ ಆಸ್ತಿಯನ್ನು ಒಟ್ಟು **62** ಲಕ್ಷಕ್ಕೆ ಮಾರಾಟ ಮಾಡಲು ನನ್ನ ತಾಯಿ ಒಪ್ಪಿದ್ದರು ಎಂದರೆ ಸರಿ. ಈ ರೀತಿ ಕರಾರುಪತ್ರವಾದಾಗ ನನ್ನ ತಾಯಿಯು ಎಷ್ಟು ಮುಂಗಡ ಹಣವನ್ನು ಪಡೆದುಕೊಂಡಿದ್ದಾರೆಂದರೆ ಗೊತ್ತಿಲ್ಲ. ನನ್ನ ತಾಯಿಯು ಆ ದಿನ **9** ಲಕ್ಷ ಹಣವನ್ನು ಪಡೆದುಕೊಂಡಿದ್ದಾರೆಂದರೆ ಗೊತ್ತಿಲ್ಲ. ನಿ.ಪಿ.**3** ರ **8** ನೇ ಪುಟ ಮತ್ತು ಅದರ ಹಿಂಭಾಗದಲ್ಲಿ **1** ಮತ್ತು **7** ನೇ ಪ್ರತಿವಾದಿಯ ಸಹಿಗಳು ಇವೆ ಎಂದು ಸಾಕ್ಷಿಯು ನೋಡಿ ಒಪ್ಪಿಕೊಂಡಿರುತ್ತಾರೆ. **8** ನೇ ಪುಟದಲ್ಲಿರುವ ಶ್ರೀರಾಮಯ್ಯನವರ ಸಹಿಯನ್ನು ನಿ.ಪಿ.**3**(ಡಿ)ಎಂದು ಗುರುತಿಸಲಾಯಿತು. **8** ನೇ ಪುಟದ ಹಿಂಭಾಗದಲ್ಲಿರುವ ಶ್ರೀರಾಮಯ್ಯನವರ ಸಹಿಯನ್ನು ನಿ.ಡಿ.**3**(ಇ) ಎಂದು ಗುರುತಿಸಲಾಯಿತು. ಅದೇರೀತಿ **8** ನೇ ಪುಟದ ಹಿಂಭಾಗದಲ್ಲಿರುವ **7** ನೇ ಪ್ರತಿವಾದಿ – ಸುರೇಶ್ ರವರ ಎರಡು

ಸಹಿಗಳನ್ನು ನಿ.ಡಿ.3(ಎಫ್) ಮತ್ತು ನಿ.ಡಿ.3(ಜಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಮೊದಲನೇ ಪುಟದಲ್ಲಿರುವ ಮತ್ತು ಕೊನೆಯ ಪುಟದಲ್ಲಿರುವ ಸುರೇಶ್ ರವರ ಸಹಿಯಲ್ಲಿ ವ್ಯತ್ಯಾಸವಿದೆ ಎಂದು ಹೇಳುತ್ತಾರೆ.

ನನಗೆ ಮಾಚುಗೊಡನಹಳ್ಳಿಯಲ್ಲಿ ಮನೆ ಇದೆ ಎಂದರೆ ಸರಿ. ಅದರ ವಿಸ್ತೀರ್ಣ ಗೊತ್ತಿಲ್ಲ. ಸದರಿ ಮನೆಯು ನನ್ನ ತಾಯಿಯ ಹೆಸರಿನಲ್ಲಿ ಇದೆ. ಅದರಿ ವಿಸ್ತೀರ್ಣ 60*120 ಅಡಿ ಇದೆ ಎಂದರೆ ಇರಬಹುದು. ಅಲ್ಲಿ ಈಗ ಯಾರು ಕೂಡ ವಾಸ ಮಾಡುತ್ತಿಲ್ಲ. ಸದರಿ ಮನೆ ಮತ್ತು ಖಾಲಿ ಜಾಗ ನನ್ನ ತಾಯಿಗೆ ಹೇಗೆ ಬಂತು ಎಂದರೆ ಗೊತ್ತಿಲ್ಲ. ಸದರಿ ಮನೆ ಜಾಗವನ್ನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಜಾಗವಿಲ್ಲ. ಮಾಚಗೊಡನಹಳ್ಳಿಯ ಸರ್ವೆ ನಂ.27 ಲ್ಲಿ ನನ್ನ ತಾಯಿಗೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ಸದರಿ 2 ಆಸ್ತಿ ಇರುವ ಬಗ್ಗೆ ಈ ಕೇಸು ಹಾಕುವಾಗ ನನಗೆ ಗೊತ್ತಿತ್ತು ಎಂದರೆ ಸರಿ. 1984 ರಲ್ಲಿ ದಾವಾ ಆಸ್ತಿಯನ್ನು ದೇವರಾಜುವಿಗೆ ಮಾರಾಟ ಮಾಡಿದ ನಂತರ ನಿಮ್ಮ ಕುಟುಂಬಕ್ಕೆ ಏನಾದರು ಆಸ್ತಿ ಇತ್ತಾ? ಎಂದರೆ ಹೌದು, ಸುಮಾರು 20 ಗುಂಟೆ ಸರ್ಕಾರಿ ದಿಣ್ಣೆಯನ್ನು ನನ್ನ ತಾಯಿಗೆ ಕೊಟ್ಟಿದ್ದರು, ಆದರೆ ಇನ್ನೂ ಖಾತೆ ಆಗಿರಲಿಲ್ಲ. 1984 ರಲ್ಲಿ ದಾವಾ ಆಸಿತಯನ್ನು ಮಾರಾಟ ಮಾಡಿದ ನಂತರ ಆಧಾಯ ಬರುವ ಯಾವುದೇ ಜಮೀನು ಇರಲಿಲ್ಲ ಎಂದರೆ ಸರಿ. ಸಾಕ್ಷಿಯು ನಾವೆಲ್ಲ ದುಡಿದ ದುಡಿಮೆಯನ್ನು ನನ್ನ ತಂದೆ ತಾಯಿಗೆ ಕೊಡುತ್ತಿದ್ದೆವು ಅದರಿಂದ ದೇವರಾಜು ಕಡೆಯಿಂದ ದಾವಾ ಆಸ್ತಿಯನ್ನು ಬಿಡಿಸಿಕೊಂಡಿದ್ದೇವೆ ಎಂದು ಹೇಳುತ್ತಾರೆ. ಈ ಬಗ್ಗೆ ದಾವೆಯಲ್ಲಿ ತಿಳಿಸಿದ್ದೀರಾ? ಎಂದರೆ ಹೌದು.

ನಾನು 10 ನೇ ತರಗತಿ ಮುಗಿಸಿದ ನಂತರ ಕೈಮಗ್ಗ ಕೆಲಸ ಮಾಡುತ್ತಿದ್ದೆನು. ವಾದಿಯರು ಮತ್ತು 2 ರಿಂದ 8 ನೇ ಪ್ರತಿವಾದಿಯರು ಕೂಡ ಕೈಮಗ್ಗ ಕೆಲಸ ಮಾಡುತ್ತಿದ್ದರು. ಮಾಚಗೊಂಡನಹಳ್ಳಿಯಲ್ಲಿ ಕೈಮಗ್ಗ ಕೆಲಸ ಮಾಡುತ್ತಿದ್ದೆವು. ನಾವು ಬೇರೆಯವರ ಕೈಮಗ್ಗಕ್ಕೆ ನೇಯಲು ಹೋಗುತ್ತಿದ್ದೆವು ಅದರಿಂದ ಕೂಲಿ ಪಡೆಯುತ್ತಿದ್ದೆವು. ಈ ಬಗ್ಗೆ ದಾಖಲೆ ಇದೆಯಾ? ಎಂದರೆ ಹೌದು. ನಮಗೆ ಸಾಕಷ್ಟು ಆದಾಯ ಇತ್ತು

ಎಂದು ತೋರಿಸಲು ದಾಖಲೆ ಇದೆಯಾ? ಎಂದರೆ ಹೌದು. ಪಿ.ಎಲ್.ಡಿ ಬ್ಯಾಂಕಿನಲ್ಲಿ ದಾಖಲೆ ಇದೆ. ಸದರಿ ದಾಖಲೆಯನ್ನು ಹಾಜರುಪಡಿಸಬಹುದಾ? ಎಂದರೆ ಹೌದು. **1** ನೇ ಪ್ರತಿವಾದಿಯು ದಿನಾಂಕ:**11.03.2016** ರಂದು **10** ನೇ ಪ್ರತಿವಾದಿಗೆ ನೋಂದಾಯಿತ ಕ್ರಯಪತ್ರವನ್ನು ಬರೆದುಕೊಟ್ಟಿದ್ದಾರೆಂದರೆ ಇರಬಹುದು. ಸಾಕ್ಷಿಯು ದಿನಾಂಕ:**11.03.2016** ರ ಕ್ರಯಪತ್ರದಲ್ಲಿರುವ **1** ನೇ ಪ್ರತಿವಾದಿಯ ಫೋಟೋವನ್ನು ನೋಡಿ ಒಪ್ಪಿಕೊಂಡಿದ್ದು, ಸದರಿ ಕ್ರಯಪತ್ರವನ್ನು ನಿ.ಡಿ.**4** ಎಂದು **1** ನೇ ಪ್ರತಿವಾದಿ ಫೋಟೋವನ್ನು ನಿ.ಡಿ.**4**(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯ ಮುಂದುವರೆದ ವಾಟಿ ಸವಾಲಿಗಾಗಿ ಸಮಯ ಕೋರಿದ್ದರಿಂದ ಮುಂದೂಡಲಾಯಿತು.**

(ನನ್ನ ಉಕ್ತಲೇಖಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತ)

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ದೊಡ್ಡಬಳ್ಳಾಪುರ.